# ಕರ್ನಾಟಕ ಗೃಹ ಮಂಡಳಿ

ಸಂಖ್ಯೆ: ಕಗೃಮ/ಉಪ್ರವ್ಯ(ಗ್ರಾಸೇ)/ಹಂಚಿಕೆ-2/ಲಾಟರಿ/2018-19 ದಿನಾಂಕ: 07-07-2018

## ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಮೆ: ಎಮ್.ಆರ್.ಪಿ.ಎಲ್. ವೇದಾಪುರಂ ಇವರ ಸಹಭಾಗಿತ್ವ ಯೋಜನೆಯಡಿ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿನ ಜಮೀನುಗಳಲ್ಲಿ ಸಾರ್ವಜನಿಕ ಸೌಲಭ್ಯಗಳನೊಳಗೊಂಡ ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಸದರಿ ನಿವೇಶನಗಳ ಹಂಚಿಕೆಗಾಗಿ ದಿನಾಂಕ: 02-02-2018 ರಂದು ಸಾರ್ವಜನಿಕ ಪ್ರಕಟಣೆ ನೀಡಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು, ಅದರಂತೆ ಮೇಲಿನ ಪ್ರಕಟಣೆಗಳಲ್ಲಿ ನಿಗಧಿಪಡಿಸಿದಂತೆ ಆರಂಭಿಕ ಠೇವಣಿ ಪಾವತಿ ಮಾಡಿ ಅರ್ಜಿ ಸಲ್ಲಿಸಿರುವ ಅರ್ಜಿದಾರರುಗಳಿಗೆ ಲಾಟರಿ ಮುಖಾಂತರ ಹಂಚಿಕೆ ಮಾಡಲು ಈ ಕೆಳಕಂಡ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿದೆ.

| ಕ್ರ. ಸಂ. | ಸ್ಥಳ | ಅರ್ಜಿದಾರರ ತಾತ್ಕಾಲಿಕ ಪಟ್ಟಿ ಪ್ರಕಟಣೆ ದಿನಾಂಕ ಮತ್ತು ಸ್ಥಳ | ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ | ಅರ್ಹ ಅರ್ಜಿದಾರರ ಅಂತಿಮ ಪಟ್ಟಿ ಪ್ರಕಟಣೆ ದಿನಾಂಕ ಮತ್ತು ಸ್ಥಳ | ಲಾಟರಿ ನಡೆಯುವ ದಿನಾಂಕ ಮತ್ತು ಸ್ಥಳ ಹಾಗೂ ಸಮಯ |
|---|---|---|---|---|---|
| 1 | ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮ | 09-07-2018 | 12-07-2018 | 17-07-2018 | 18-07-2018 ಬೆಳಿಗ್ಗೆ 11.00 ಗಂಟೆಗೆ. ಕಲಾಮಂದಿರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿನೋಬಾ ರಸ್ತೆ, ಮೈಸೂರು. |
| | | ಕರ್ನಾಟಕ ಗೃಹ ಮಂಡಳಿ ಜಿಲ್ಲಾ ಯೋಜನಾ ಕಛೇರಿ, ಮೈಸೂರು ಹಾಗೂ ಕೇಂದ್ರ ಕಛೇರಿ, ಬೆಂಗಳೂರು. | | | |

### ಷರತ್ತು ಮತ್ತು ನಿಬಂಧನೆಗಳು:

1) ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದಲ್ಲಿ ಕರ್ನಾಟಕ ಗೃಹ ಮಂಡಳಿಯು ಮೆ. ಎಂ.ಆರ್.ಪಿ.ಎಲ್. ವೇದಾಪುರಂ ಇವರ ಸಹಭಾಗಿತ್ವ ಯೋಜನೆಯಡಿ ಅಭಿವೃದ್ಧಿಪಡಿಸಿದ ಸ್ವತ್ತುಗಳ ಹಂಚಿಕೆಗಾಗಿ ದಿನಾಂಕ: 02-02-2018 ಸಾರ್ವಜನಿಕ ಪ್ರಕಟಣೆಯಲ್ಲಿ ನಿಗಧಿಪಡಿಸಿದಂತೆ ಆರಂಭಿಕ ಠೇವಣಿ ಪಾವತಿ ಮಾಡಿ ಅರ್ಜಿ ಸಲ್ಲಿಸಿರುವ ಅರ್ಜಿದಾರರುಗಳಿಗೆ ಕರ್ನಾಟಕ ಗೃಹ ಮಂಡಳಿ ಹಂಚಿಕೆ ನಿಯಮ 1983 ರ ನಿಯಮ 9ರ ಅನ್ವಯ ಪ್ರವರ್ಗವಾರು ಲಾಟರಿ ಮುಖಾಂತರ ಹಂಚಿಕೆ ಮಾಡಲಾಗುವುದು.

2) ಅರ್ಜಿಯನ್ನು ನಿಗಧಿತ ಅವಧಿಯೊಳಗೆ ಆರಂಭಿಕ ಠೇವಣಿ ಹಣದೊಂದಿಗೆ ಸಲ್ಲಿಸಿರುವ ಅರ್ಜಿದಾರರನ್ನು ಮಾತ್ರ ಅರ್ಹ ಅರ್ಜಿದಾರರ ಪಟ್ಟಿಗೆ ಪರಿಗಣಿಸಲಾಗಿದೆ. ಅರ್ಜಿ ನೊಂದಾಯಿಸಿ ಆರಂಭಿಕ ಠೇವಣಿ ಪಾವತಿ ಮಾಡದ ಅರ್ಜಿದಾರರನ್ನು ಅರ್ಹ ಅರ್ಜಿದಾರರ ಪಟ್ಟಿಗೆ ಪರಿಗಣಿಸಲಾಗಿಲ್ಲ.

3) ನಿಗಧಿಪಡಿಸಿದ ಅವಧಿಯೊಳಗೆ ನೊಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ ಪಾವತಿ ಮಾಡಿದ್ದು, ಅರ್ಹ ಅರ್ಜಿದಾರರ ಪಟ್ಟಿಯಲ್ಲಿ ಹೆಸರು ಬಿಟ್ಟುಹೋಗಿದ್ದಲ್ಲಿ ಅಥವಾ ಇತರೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಈ ಮೇಲೆ ನಿಗಧಿಪಡಿಸಿದ ದಿನಾಂಕದೊಳಗಾಗಿ ತಮ್ಮ ಆಕ್ಷೇಪಣೆಗಳನ್ನು, ಪೂರಕ ದಾಖಲಾತಿಗಳೊಂದಿಗೆ ಸಂಬಂಧಿಸಿದ **ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಗೃಮಂ, ಜಿಲ್ಲಾ ಯೋಜನಾ ಕಛೇರಿ, ಮೈಸೂರು,** ಇವರಿಗೆ ಅಥವಾ **ಉಪ ಪ್ರಧಾನ ವ್ಯವಸ್ಥಾಪಕರು(ಗ್ರಾಸೇ), ಕರ್ನಾಟಕ ಗೃಹ ಮಂಡಳಿ, 4ನೇ ಮಹಡಿ, ಕಾವೇರಿ ಭವನ, ಬೆಂಗಳೂರು-9** ಇಲ್ಲಿಗೆ ಮೇಲೆ ತಿಳಿಸಲಾದ ದಿನಾಂಕದೊಳಗೆ ಕಛೇರಿ ವೇಳೆಯಲ್ಲಿ ಖುದ್ದಾಗಿ ಸಲ್ಲಿಸಬಹುದು. ಅವಧಿ ಮುಗಿದ ನಂತರ ಆಕ್ಷೇಪಣೆ ಸಲ್ಲಿಸಿದಲ್ಲಿ ಅದನ್ನು ಪರಿಗಣಿಸಲಾಗುವುದಿಲ್ಲ.

4) ಲಾಟರಿಯಲ್ಲಿ ಯಶಸ್ವಿಯಾದ ಅರ್ಜಿದಾರರುಗಳಿಗೆ ಮಂಡಳಿಯ ಅನುಮೋದನೆ ನಂತರ ಅರ್ಜಿದಾರರ ನೀಡಿರುವ ದಾಖಲೆಗಳನ್ನು ಪರಿಶೀಲಿಸಿ ಹಂಚಿಕೆ ಪತ್ರ ನೀಡಲಾಗುವುದು. ಯಶಸ್ವಿಯಾಗದ ಅರ್ಜಿದಾರರುಗಳಿಗೆ ಠೇವಣಿ ಹಣವನ್ನು ಯಾವುದೇ ಬಡ್ಡಿ ನೀಡದೇ ಹಿಂತಿರುಗಿಸಲಾಗುವುದು.

5) ನಿವೇಶನದ ಅಳತೆಯಲ್ಲಿ ವ್ಯತ್ಯಾಸವೇನಾದರು ಕಂಡುಬಂದಲ್ಲಿ ಅದರ ನಿಖರ ಅಳತೆ ಮತ್ತು ವಿಸ್ತೀರ್ಣಕ್ಕನುಗುಣವಾಗಿ ದರವು ಒಳಪಟ್ಟಿರುತ್ತದೆ.

6) ಲಾಟರಿಯಲ್ಲಿ ಯಶಸ್ವಿಯಾದ ಅರ್ಜಿದಾರರು ನಿವೇಶನ ಬೇಡವೆಂದು ಕೋರಿಕೆ ಸಲ್ಲಿಸಿದಲ್ಲಿ ಪಾವತಿಸಿರುವ ಆರಂಭಿಕ ಠೇವಣಿಯಲ್ಲಿ ಶೇ.25 ರಷ್ಟು ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

7) ದಿನಾಂಕ: 02-02-2018ರ ಪ್ರಕಟಣೆಯಲ್ಲಿ ತಿಳಿಸಿದ ಸ್ವತ್ತುಗಳ ಸಂಖ್ಯೆಗಳು ಬದಲಾವಣೆಗೆ ಒಳಪಟ್ಟಿರುತ್ತವೆ.

8) ಕರ್ನಾಟಕ ಗೃಹ ಮಂಡಳಿ ಕಾಯ್ದೆ 1962 ಅಡಿ ಕರ್ನಾಟಕ ಗೃಹ ಮಂಡಳಿ ರೆಗ್ಯೂಲೇಷನ್ಸ್ 1983 ರನ್ವಯ ಹಂಚಿಕೆಗೆ ಸಂಬಂಧಿಸಿ ಎಲ್ಲಾ ಹಕ್ಕುಗಳನ್ನು ಗೃಹ ಮಂಡಳಿಯು ಕಾಯ್ದಿರಿಸಿಕೊಂಡಿದೆ.

9) ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ **www.khbcustomerinfo.com** or **www.khb.kar.nic.in** ನೋಡುವುದು.

ಸಹಿ/-
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

ದಿನಾಂಕ: 07-07-2018

ವಾಸಾಸಂಇ/ಬೆಂ.ಸ/529/2018-19

Scanned by CamScanner